ಈ) ಸರ್ಕಾರಿ ಆದೇಶ ಸಂಖ್ಯೆ ಇಡಿ 219 ಎಸ್‌ಎಲ್‌ಬಿ 98, ದಿನಾಂಕ 25–03–1999ರ ಪ್ರಕಾರ 294 ತೋಟಗಾರಿಕಾ ಹುದ್ದೆಗಳನ್ನು ಸಂಗೀತ, ಚಿತ್ರಕಲೆ ಹುದ್ದೆಗಳನ್ನಾಗಿ ಪರಿವರ್ತಿಸಿಕೊಂಡು ಸ್ಥಳಾಂತರಿಸಿ ಅವಶ್ಯಕತೆಯಿರುವ ಪ್ರೌಢಶಾಲೆಗಳಿಗೆ ಸರಿ ಸಮಾನವಾಗಿ ನೇಮಕಾತಿ ಮಾಡಲು ಆದೇಶಿಸಲಾಗಿತ್ತು

ಉ) ರಾಜ್ಯದಲ್ಲಿರುವ ಸರ್ಕಾರಿ ಪ್ರೌಢಶಾಲೆಗಳಲ್ಲಿ ತೋಟಗಾರಿಕೆ ಮಾಡುವಷ್ಟು ಭೂಮಿ ಅಥವಾ ನೀರು ಇಲ್ಲದೇ ಇರುವುದರಿಂದ ತೋಟಗಾರಿಕೆ ಖಾಲಿ ಹುದ್ದೆಗಳನ್ನು ಈ ಹಿಂದೆ ಪರಿವರ್ತಿಸಲಾಗಿದೆ

ಊ) ತೋಟಗಾರಿಕೆ ಹುದ್ದೆ ಖಾಲಿ ಇರುವ ಶಾಲೆಯ ಮುಖ್ಯೋಪಾಧ್ಯಾಯರು ಆ ಶಾಲೆಗೆ ತೋಟಗಾರಿಕೆ ಹುದ್ದೆಯ ಅವಶ್ಯಕತೆ ಇದೆ ಎಂದು ತಿಳಿಸಿದರೆ ಅಂತಹ ಶಾಲೆಗಳಿಂದ ಮಾಹಿತಿ ಪಡೆದು ತೋಟಗಾರಿಕಾ ಹುದ್ದೆಗಳಿಗೂ ನೇಮಕಾತಿ ಮಾಡಬಹುದು

ಋ) ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ತಂದ ಕೂಡಲೇ ನೇಮಕಾತಿ ಪ್ರಕ್ರಿಯೆಯನ್ನು ಪ್ರಾರಂಭಿಸಲು ಆಸ್ಪದವಾಗುತ್ತದೆ

1637 (2120) ಶ್ರೀ ಸಿದ್ದು ಸಾವದಿ (ಜಮಖಂಡಿ) – ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಹೆಣ್ಣು ಮತ್ತು ಗಂಡು ಮಕ್ಕಳು ಸೇರಿ ಎಂಟನೇ ತರಗತಿಯಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು,

ಆ) ಈ ಎಲ್ಲಾ ವಿದ್ಯಾರ್ಥಿಗಳಿಗೆ ಸೈಕಲ್‌ಗಳನ್ನು ಕೊಡಲಾಗಿದೆಯೇ,

ಇ) ಇಲ್ಲವಾದಲ್ಲಿ, ಯಾವಾಗ ಕೊಡಲಾಗುವುದು,

ಈ) ಚಿಕ್ಕ ಮಕ್ಕಳಲ್ಲಿ ಬಡವ ಶ್ರೀಮಂತವೆಂಬ ತಾರತಮ್ಯವನ್ನು ಹೋಗಲಾಡಿಸಲು ಎಂಟನೇ ತರಗತಿಯ ಎಲ್ಲಾ ವಿದ್ಯಾರ್ಥಿಗಳಿಗೆ ಸೈಕಲ್ ಕೊಡಲು ಸರ್ಕಾರ ಯೋಚಿಸಿದೆಯೇ,

ಉ) ಬಡತನ ರೇಖೆಗಿಂತ ಕೆಳಗಿರುವ ಮಕ್ಕಳ ಸಂಖ್ಯೆಯನ್ನು ಯಾವ ಆಧಾರದ ಮೇಲೆ ಗುರುತಿಸಲಾಗುವುದು,

ಊ) ಖಾಸಗಿ ಮತ್ತು ಸರ್ಕಾರಿ ಶಾಲೆಗಳಲ್ಲಿನ ಎಂಟನೇ ತರಗತಿಯ ಎಲ್ಲಾ ವಿದ್ಯಾರ್ಥಿಗಳಿಗೆ ಸೈಕಲ್ ನೀಡಲು ಬೇಕಾಗುವ ಅನುದಾನವೆಷ್ಟು, ಇದುವರೆವಿಗೂ ಖರ್ಚಾದ ಹಣವೆಷ್ಟು ?

ಶ್ರೀ ಬಿ ಎಸ್ ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) 2006–07ನೇ ಸಾಲಿನಲ್ಲಿ 8ನೇ ತರಗತಿಯಲ್ಲಿ 4,07,160 ಹೆಣ್ಣು ಮಕ್ಕಳು ಮತ್ತು 3,90,998 ಗಂಡು ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ

ಆ) ಇಲ್ಲಾ, ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ 8ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಕ್ಕೆ ಸೇರಿದ 1,75,023 ಹೆಣ್ಣುಮಕ್ಕಳಿಗೆ ಮತ್ತು 2,45,300 ಗಂಡು ಮಕ್ಕಳಿಗೆ ಸರ್ಕಾರದ ವತಿಯಿಂದ ಉಚಿತವಾಗಿ ಸೈಕಲ್‌ಗಳನ್ನು ವಿತರಿಸಲಾಗಿದೆ

ಇ) ಉದ್ಭವಿಸುವುದಿಲ್ಲ

ಈ) ಇಲ್ಲ

ಉ) ಬಿ ಪಿ ಎಲ್ ಕಾರ್ಡ್ ಹೊಂದಿರುವ ಆಧಾರದ ಮೇಲೆ ಮಕ್ಕಳ ಸಂಖ್ಯೆಯನ್ನು ಗುರುತಿಸಲಾಗಿದೆ

ಊ) 8ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಒಟ್ಟು 7,98,158 ಮಕ್ಕಳಿಗೆ, ಈಗ ಖರೀದಿ ಮಾಡಿರುವ ಬೈಸಿಕಲ್ ದರ ರೂ 2030/– ರಂತೆ ಒಟ್ಟು ರೂ 162 02 ಕೋಟಿ ಅನುದಾನ ಬೇಕಾಗುತ್ತದೆ ಇದುವರೆವಿಗೂ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ 8ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಬಡತನ ರೇಖೆಗಿಂತ ಕೆಳಗಿರುವ ಹೆಣ್ಣುಮಕ್ಕಳಿಗೆ ಬೈಸಿಕಲ್ ವಿತರಿಸಲು 35 53 ಕೋಟಿ ರೂ ಗಳು, ಗಂಡು ಮಕ್ಕಳಿಗೆ ಬೈಸಿಕಲ್ ವಿತರಿಸಲು 40 00 ಕೋಟಿ ರೂ ಗಳು ಹಾಗೂ ಈ ಯೋಜನೆಯ ಅನುಷ್ಠಾನ ವೆಚ್ಚಗಳಿಗೆ 0 20 ಕೋಟಿ ರೂ ಗಳು, ಹೀಗೆ ಒಟ್ಟು 75 73 ಕೋಟಿ ರೂ ಗಳು ವೆಚ್ಚವಾಗಿರುತ್ತದೆ

1638 (2309) ಶ್ರೀ ಸಿದ್ದು ಸಾವದಿ (ಜಮಖಂಡಿ) –ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?